ಓ.ಎಸ್. ನಂಃ138/2017

ಪಿ.ಡಬ್ಲ್ಯೂ -01

ದಿನಾಂಕ. 11.08.2021 ಸಾಕ್ಷಿಯನ್ನು ಪುನಃ ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಃ ವಾದಿ ಪರ ಶ್ರೀ ಜಿ.ಆರ್.ಎ.ವಕೀಲರಿಂದ**

ದಾವಾ ಆಸ್ತಿಗೆ ಸಂಬಂಧಪಟ್ಟಂತೆ ರಸೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.-1 ಎಂದು, ದಾವಾ ಆಸ್ತಿಗೆ ಸಂಬಂಧಿಸಿದ 3 ಫೋಟೋಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ.2 ರಿಂದ 4 ಎಂದು, ಸಿ.ಡಿ.ಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.-4(ಎ) ಎಂದು, ವಾದ ಪತ್ರದೊಂದಿಗೆ ನ್ಯಾಯಾಲಯ ಕ್ಕೆ ಸಲ್ಲಿಸಿದ ಕರಡು ನಕಾಶೆಯನ್ನು ಹಾಜರುಪಸಿಡಿದ್ದು ಅದನ್ನು ನಿ.ಪಿ.5 ಎಂದು, ನಗರಂಗೆರೆ ಪಂಚಾಯಿತಿ ವತಿಯಿಂದ ನೀಡಲಾದ ನಮೂನೆ-9 ಮತ್ತು 11 ನ್ನು ಹಾಜರುಪಡಿಸಿದ್ದು ಅವುಗಳನ್ನು

ನಿ.ಪಿ.6 ಮತ್ತು 7 ಎಂದು, ದಾವಾ ಆಸ್ತಿಗೆ ಸಂಬಂಧಿಸಿದ 2020-21 ರ ಡಿ.ಸಿ.ಬಿ. ರಿಜಿಸ್ಟರ್ ನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.-8 ಎಂದು, ಎರಡು ಕಂದಾಯ ಪಾವತಿ ರಸೀದಿಗಳನ್ನು ಹಾಜರುಪಸಿಡಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ.-9 ಮತ್ತು 10 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ವಾದಿ ಪರ ವಕೀಲರು 14.10.2011,30.12.2014,09.04.2015 ದಾನ ಪತ್ರದ ನಕಲು ಪ್ರತಿಯೊಂದಿಗೆ ಉಪನೋಂದಾಣಾಧಿಕಾರಿ ನೀಡಿದ ಪ್ರಮಾಣ ಪತ್ರ ಎಂದು ಸಲ್ಲಿಸಿದ್ದು, ಸದರಿ ದಾಖಲಾತಿಗಳನ್ನು ಗುರುತು ಮಾಡಲು ಎದುರು ದಾರ ವಕೀಲರು ಆಕ್ಷೇಪಣೆ ಸಲ್ಲಿಸಿದ್ದು, ಸದರಿ ದಾಖಲಾತಿಯ ಗುರುತುವಿಕೆಯ ಸುನಾವಣೆಗಾಗಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಿದೆ.

ಅಪರ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಚಳ್ಳಕೆರೆ.